ಶ್ರೀ ಆರ್. ಚಿಕ್ಕಯ್ಯ :—ತಮಗೆ ಆ ವರದಿ ತಲುಪಿ 9 ತಿಂಗಳಾದಾಗ್ಯೂ ತಾವು ಇನ್ನೂ ತೀರ್ಮಾನ ತೆಗೆದುಕೊಳ್ಳದಿರುವುದು ಬಹಳ ದೀರ್ಘ ಕಾಲ ಇದರ ಬಗ್ಗೆ ವಿಳಂಬ ಆಗಿದೆ ಅನ್ನಬಹುದಲ್ಲವೆ ?

ಶ್ರೀ ಎ. ಶಂಕರ ಆಳ್ವ .—ದೀರ್ಘಕಾಲವಾಯಿತು ಎಂದು ಹೇಳುವುದಕ್ಕಾಗುವುದಿಲ್ಲ. ಅದನ್ನು ಜಾಯಿಂಟ್ ರಿಜಿಸ್ಟ್ರಾರ್ ಅವರ ಕಡೆಗೆ ಬೇರೆ ವಿಚಾರಣೆಗೆ ಕೂಡಲಾಗಿತ್ತು.

ಶ್ರೀ ಆರ್. ಚಿಕ್ಕಯ್ಯ : ಹಾಗಾದರೆ ತೀರ್ಮಾನ ತೆಗೆದುಕೊಳ್ಳುವುದಕ್ಕೆ ತಮಗೆ ಇನ್ನಷ್ಟು ಕಾಲ ಬೇಕೆಂಬುದನ್ನು ಹೇಳುತ್ತೀರಾ ?

ಶ್ರೀ ಎ. ಶಂಕರ ಆಳ್ವ :—ನಾನಾಗಲೇ ಹೇಳಿದ್ದೇನೆ. ಇದನ್ನು ಲಾ ಇಲಾಖೆಗೆ ಕಳುಹಿಸಿದ್ದೇವೆ. ಅಲ್ಲಿಂದ ಆ ಕೊಶ್ಚನ್ಸ್ಗೆ ಬಂದ ತಕ್ಷಣ ಅದನ್ನೂ ಮತ್ತು ಒಂದು ನೋಟೀಸನ್ನು ಆ ಪಾರ್ಟಿಗೆ ಕಳುಹಿಸಿ ಅವರಿಂದ ಉತ್ತರ ಬಂದ ಕೂಡಲೆ ತೀರ್ಮಾನ ಕೈಗೊಳ್ಳುತ್ತೇವೆ.

ಶ್ರೀ ಪಿ. ಎಂ. ಬಂಗಿ : ಈ ದೂರು ವಿಸ್ಅಪ್ರೋಪ್ರಿಯೇಷನ್ನಿಗೆ ಸಂಬಂಧಪಟ್ಟಿದೆ ?

ಶ್ರೀ ಎ. ಶಂಕರ ಆಳ್ವ.—ಅದಕ್ಕೂ ಸಂಬಂಧಪಟ್ಟಿದೆ. ಇನ್ನೂ ಬೇರೆ ಬೇರೆ ಕಾರಣಗಳೂ ಸಹ ಇವೆ

MR. SPEAKER —Question No. 5 is hurled over. Now questions are over.

QUESTION FOR ANSWERS ON THE DAY

(But not taken up)

CO-OPERATIVE SOCIETIES IN MAGADI TALUK

17. SRI BETTASWAMY GOWDA (Kudur).—

Will the Minister for Co-operation be pleased to state :—

(*a*) the number of Co-operative Societies in Magadi Taluk;

(*b*) the number of them the accounts of which have been audited annually ;

(*c*) the number of such Co-operative Societies where funds are misappropriated :

(*d*) the names of Societies where funds have been misappropriated ;

(*e*) the action taken by the Government in this behalf ;

(*f*) the reasons : if no action has been taken so far ?

SRI A. SHANKARA ALVA.—(Minister for Co-operation)

(*a*) 158 Co-operative Societies

(*b*) auditing of accounts relating to 145 Co-operative societies have been conducted.

(*c*) in 17 Co-operative Societies funds have been misappropriated.

(*d*) list appended

(*e*) The Co-operative Department has launched some criminal cases with the permission of the Government. In some instances cases have been filed. In one case the money has been recovered. Some other cases are pending in the courts.

(*f*) suitable steps have been taken

THE NAMES OF SOCIETIES WHERE FUNDS HAVE BEEN MISAPPROPRIATED.

1 Magadi Rural Industrial Co-operative Society
2 Town Consumers Co-operative Society, Magadi
3 Cholanayakanahalli Service Co-operative Society
4 Chamaraja Water Works Co-operative Society
5 Jangere Potter Co-operative Society
6 Bettasandra Service Co-operative Society

7 Kalkere Service Co-operative Society
8 Mayasandra Service Co-operative Society
9 Biskur Service Co-operative Society
10 Old laya Service Co-operative Society
11 Hulikal Co-operative Society
12 Shanthapura Service Co-operative Society
13 Chikkamudugere Service Co-operative Society
14 Bettahalli Service Co-operative Society
15 Marasandra Service Co-operative Society
16 Solur Service Co-operative Society
17 Marikuppe Service Co-operative Society

PAPERS LAID ON THE TABLE

SRI A. SHANKARA ALVA.--I beg to lay the 13th *Annual* Report of the Mysore State Warehousing Corporation for the year 1970-71 under Section 31 (ii) of the Warehousing Corporation Act 1962 (Central Act 58 of 1962)

MR. SPEAKER.—The report is laid

MURDER AT A VILLAGE IN GOKAK TALUK

ಶ್ರೀ ಎಂ. ಎಸ್. ಕೃಷ್ಣನ್ (ಮಲ್ಲೇಶ್ವರಂ) : ನಾನು ಒಂದು ಗಹನವಾದ ವಿಷಯವನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. 19ನೇ ತಾರೀಖು ಜುಲೈ ಮೂಹೆಯಲ್ಲಿ ಗೋಕಾಕ್ ತಾಲ್ಲೂಕಿನ ಬೆಂಟಿನ ಮರಡಿ ಎಂಬ ಗ್ರಾಮದಲ್ಲಿ ಒಂದು ಭೀಕರ ಕೊಲೆ ನಡೆದಿದೆ. ಆ ಕೊಲೆಯಲ್ಲಿ ಶ್ರೀಮಾನ್ ವಿ. ಎಸ್. ಕೌಜಲಗಿಯವರು ಇನ್‌ವಾಲ್ವ್ ಆಗಿದ್ದಾರೆ. ಇದರ ಬಗ್ಗೆ ನಾನು ಈಗಾಗಲೇ ತಮಗೆ ನೋಟೀಸ್ ಕಳುಹಿಸಿಕೊಟ್ಟಿದ್ದೇನೆ.

ಅಧ್ಯಕ್ಷರು : ಯಾವಾಗ ಕಳುಹಿಸಿದ್ದೀರಿ ?

ಶ್ರೀ ಎಂ. ಎಸ್. ಕೃಷ್ಣನ್ : ಆಗಲೇ ಕಳುಹಿಸಿದ್ದೇನೆ. ಇದು ಬಹಳ ಮುಖ್ಯವಾದ ವಿಷಯ. One of our State Minister and (one) Parliament member is involved. have asked permission

from you to raise this matter. ಶ್ರೀಮತಿ ನಾಗವ್ವ ಎಂಬ ಒಬ್ಬ ಹೆಂಗಸು ತಮಗೆ ಈ ಬಗ್ಗೆ ಒಂದು ಕಾಗದವನ್ನು ಬರೆದು ತಮ್ಮನ್ನೂ ಸಹ ಕೇಳಿ ಕೊಂಡಿದ್ದಾರೆ. She has given the entire history. ಅದಕ್ಕಾಗಿ ಸರ್ಕಾರದವರು ಇದರ ಬಗ್ಗೆ ಒಂದು ಹೇಳಿಕೆಯನ್ನು ಇಲ್ಲಿ ಕೊಡುವುದಕ್ಕೆ ತಾವು ಅನುಮತಿ ಕೊಡಬೇಕು. ಭೀಕರವಾದ ಕೊಲೆಯಾಗಿದೆ. ಮಂತ್ರಿಗಳ ಮೇಲೂ ಸಹ ಒಂದು ಧೀರ್ಘವಾದ ದೂರು ಬಂದಿದೆ. ಶ್ರೀ ನಾಗಪ್ಪ ಬಸಪ್ಪ ಎನ್ನುವವರು ಒಂದು ದೂರು ಕೊಟ್ಟಿದ್ದಾರೆ. ಅವರು ಅದನ್ನು ಈ ಕಾಗದದಲ್ಲಿ ಎನ್‌ಕ್ಲೋಜ್ ಮಾಡಿದ್ದಾರೆ. He has filed it before the Judicial Magistrate. It is attrocious: That is why I wanted a statement to be made in the House. The letter was given to you on the 24th August.

MADAM SPEAKER:— There are rules to be observed. ಮಾನ್ಯ ಸದಸ್ಯರಿಂದ ನೋಟೀಸ್ ಈಗ ಬಂದಿದೆ, ಯಾರೂ ಇದಕ್ಕೆ ಇದುವರೆಗೆ ಅನುಮತಿ ಕೇಳಲಿಲ್ಲ. ಅಂದ ಮೇಲೆ ತಾವು ಅಂತ, ಕಂತೆ, ಅದಂತೆ ಇದಂತೆ ಎಂದು ಇಲ್ಲಿ ಈಗ ಹೇಳಿದರೆ ಹೇಗೆ? ತಮ್ಮ ನೋಟೀಸ್ ಈಗ ಬಂದಿದೆ. ನಾನು 11-30 ಗಂಟೆಯಿಂದಲೂ ಆಫೀಸಿನಲ್ಲಿ ಇದ್ದೇನೆ. ನನಗೆ ಅಲ್ಲಿಯವರೆಗೂ ತಮ್ಮ ನೋಟೀಸ್ ಬರಲಿಲ್ಲ. ತಾವು ಕಳುಹಿಸಿದಂಥ ನೋಟೀಸ್ ಈಗ ನನಗೆ ಬಂದಿದೆ.

ಶ್ರೀ ಎಂ. ಎಸ್. ಕೃಷ್ಣನ್; 24-8-1973ರಂದು ಶ್ರೀಮತಿ ನಾಗಮ್ಮ ಎಂಬುವರು ತಮಗೆ ಒಂದು ಅರ್ಜಿಯನ್ನು ಇದರ ಬಗ್ಗೆ ಕೊಟ್ಟಿದ್ದಾರೆ.

ಶ್ರೀ ಕಾಗೋಡು ತಿಮ್ಮಪ್ಪ; ಕಾಳಿನದಿ ಯೋಜನೆಯ ಗುತ್ತಿಗೆದಾರರಾದ ಥಾಪರ್ ಕಂಪನಿಯಲ್ಲಿ ಕೆಲಸಮಾಡುತ್ತಿರುವ ನೌಕರರ ಮೇಲೆ ಪೋಲೀಸರ ದೌರ್ಜನ್ಯದ ಬಗ್ಗೆ ನಾನು ಒಂದು ನೋಟೀಸ್ ದಾಂಢೇಲಿಯಿಂದ ಕಳುಹಿಸಿದ್ದೇನೆ. ಅದರ ಬಗ್ಗೆ ಏನಾಯಿತು?

ಅಧ್ಯಕ್ಷರು; ನಾನು ಅದನ್ನು ಸರ್ಕಾರಕ್ಕೆ ಕಳುಹಿಸಿದ್ದೇನೆ. ಅವರಿಂದ ಸ್ಟೇಟ್‌ಮೆಂಟ್ ಬಂದ ಮೇಲೆ ಅದನ್ನು ಅಜೆಂಡಾದಲ್ಲಿ ಸೇರಿಸಲಾಗುತ್ತದೆ.

PROVIDING OCCASION TO DISCUSS THE CIRCUMSTANCES OF DEATH OF A M. P. C. C. MEMBER.

*ಶ್ರೀ ಹೆಚ್. ಟಿ. ಕೃಷ್ಣಪ್ಪ (ನಾಗಮಂಗಲ); ಮಾನ್ಯ ಅಧ್ಯಕ್ಷರೇ, ಮೊನ್ನೆ ಬುಧವಾರದ ದಿವಸ ಈ ಸದನದ ಮುಂದೆ ಎಂ. ಪಿ, ಸಿ. ಸಿ. ಸದಸ್ಯರಾದಂಥ